1. ಕೆಳಗಿನ ಯಾವ ಸಮೀಕರಣವು ಫಿಷರ್‌ನ ಹಣದ ಪರಿಮಾಣದ ಸಿದ್ಧಾಂತವಾಗಿದೆ ?

(A) M = PT/V (B) V = PT/M (C) MV = PT (D) P = MV/T

2. ನವ ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರ ಪ್ರಕಾರ ಜನರು ಕೈಯಲ್ಲಿರಿಸಿಕೊಳ್ಳುವ ಹಣ ಅಥವಾ ಹಣದ ಬೇಡಿಕೆ ಪ್ರಾಥಮಿಕವಾಗಿರುವುದು

(A) ಮುಂಜಾಗರೂಕತೆಯ ಕಾರಣವಾಗಿ
(B) ಸಟ್ಟಾ ವ್ಯವಹಾರದ ಕಾರಣಕ್ಕಾಗಿ
(C) ಎಲ್ಲಾ ಕಾರಣಗಳಿಗಾಗಿ
(D) ವಹಿವಾಟುಗಳ ಕಾರಣಕ್ಕಾಗಿ

3. ತಯಾರಿಕೆಯ ಪ್ರತಿ ಹಂತಗಳಲ್ಲಿ ಉತ್ಪಾದಿತ ವಸ್ತುಗಳು ಮತ್ತು ಉತ್ಪಾದನಾಂಗಗಳ ಮೌಲ್ಯಗಳ ನಡುವಿನ ವ್ಯತ್ಯಾಸವು

(A) ಮೌಲ್ಯವರ್ಧಿತ (B) ಹೂಡಿಕೆ (C) ಬಡ್ಡಿಯ ದರ (D) ವೇಗವರ್ಧಕ

4. M = ರೂ. 1,000; V = 10; T = 1000' ಆದರೆ P = ?

(A) 15 (B) 20 (C) 10 (D) 25

5. "ಅಭಿವೃದ್ಧಿ ಹೀನ" (ಅಂಡರ್‌ಡೆವಲಪ್‌ಮೆಂಟ್) ಎಂಬ ಶಬ್ದವು ಸೂಚಿಸುವುದು

(A) ಅತಿ ಜನಸಂಖ್ಯಾ ಬೆಳವಣಿಗೆ
(B) ಬಹಳ ಹಿಂದುಳಿದ ಸಾಮಾಜಿಕ ಸಂಸ್ಥೆಗಳು
(C) ಉನ್ನತ ಮಟ್ಟದ ಆರ್ಥಿಕ ಮತ್ತು ತಾಂತ್ರಿಕ ಅಭಿವೃದ್ಧಿ
(D) ಕೆಳಮಟ್ಟದ – ನೈಜ ತಲಾದಾಯ

6. ಸಮಾನುಪಾತ ಕರ ರಚನೆಯ ಕೆಳಗೆ

(A) ಒಟ್ಟು ತೆರಿಗೆ ಉತ್ಪನ್ನವು ಸ್ಥಿರವಾಗಿರುತ್ತದೆ
(B) ತೆರಿಗೆ ದರವು ಸ್ಥಿರವಾಗಿರುತ್ತದೆ
(C) ತೆರಿಗೆಯ ಮೂಲವು ಸ್ಥಿರವಾಗಿರುತ್ತದೆ
(D) (B) ಮತ್ತು (C) ಎರಡೂ

7. ಆರ್.ಎ. ಮಸ್‌ಗ್ರೇವ್‌ನ ಪ್ರಕಾರ ಲಂಬ ತೆರಿಗೆ ಸಮಾನತೆ (ವರ್ಟಿಕಲ್ ಟ್ಯಾಕ್ಸ್ ಈಕ್ವಿಟಿ) ಎಂದರೆ

(A) ಸಮಾನ ಮಟ್ಟದ ಆದಾಯವನ್ನು ಹೊಂದಿರುವ ಜನರೊಳಗೆ ಸಮಾನತೆ
(B) ವಿಭಿನ್ನ ಮಟ್ಟದ ಆದಾಯವನ್ನು ಹೊಂದಿರುವ ಜನರೊಳಗೆ ಸಮಾನತೆ
(C) ಬಡ ಜನರೊಳಗೆ ಸಮಾನತೆ
(D) ಶ್ರೀಮಂತರೊಳಗೆ ಸಮಾನತೆ

ಚಿತ್ತು ಬರಹಕ್ಕಾಗಿ ಸ್ಥಳ / SPACE FOR ROUGH WORK



www.kpsvaani.com

Scanned by CamScanner

8. ಸ್ಯಾಮ್ಯುಯೆಲ್‌ಸನ್‌ನ "ಸಾರ್ವಜನಿಕ ಸರಕಿನ ಸಿದ್ಧಾಂತ"ವು ಇದರ ಮೇಲೆ ಆಧಾರಿತವಾಗಿದೆ
   (A) ನಿರಂಕುಶ ಮಾರ್ಗ
   (B) ಗುಂಪು ಮನೋವೃತ್ತಿ
   (C) ವೈಯಕ್ತಿಕ ಮಾರ್ಗ
   (D) ಭಾಗವಹಿಸುವಿಕೆಯ ಮಾರ್ಗ

9. ಆರ್ಥಿಕತೆಯಲ್ಲಿ ಗೇಣಿಯನ್ನು ಬಯಸುವುದು ಇದಕ್ಕೆ ದಾರಿಯಾಗಿದೆ
   (A) ಪ್ರತ್ಯಕ್ಷವಾಗಿ ಅನುತ್ಪಾದಕ ಚಟುವಟಿಕೆಗಳು
   (B) ಪ್ರತ್ಯಕ್ಷ ಉತ್ಪಾದಕತೆ ಚಟುವಟಿಕೆಗಳು
   (C) ಪರೋಕ್ಷವಾಗಿ ಅನುತ್ಪಾದಕ ಚಟುವಟಿಕೆಗಳು
   (D) ಪ್ರತ್ಯಕ್ಷ ಉತ್ಪಾದಕತೆ ಹೂಡಿಕೆಗಳು

10. ಜೆ.ಎಮ್. ಕೇನ್ಸ್‌ರು ಈ ಕೆಳಗಿನವುಗಳನ್ನು ಪರಿಹರಿಸಲು ಸರಕಾರದ ವೆಚ್ಚವನ್ನು ಹೆಚ್ಚಿಸಲು ಸಲಹೆ ಮಾಡಿರುವರು
   (A) ಹಣದುಬ್ಬರ
   (B) ಹಣದಿಳಿತ
   (C) (A) ಮತ್ತು (B) ಎರಡೂ
   (D) ಹೈಪರ್ ಇನ್‌ಫ್ಲೇಷನ್

11. 'ಗಿನಿ–ಗುಣಕ' (ಗಿನಿ–ಕೋಎಫಿಷಿಯಂಟ್) ಮಾಪನ ಮಾಡುವುದು
   (A) ವೆಚ್ಚದಲ್ಲಿಯ ಅಸಮಾನತೆ
   (B) ಆದಾಯದಲ್ಲಿ ಅಸಮಾನತೆ
   (C) ಸಂಪತ್ತಿನಲ್ಲಿ ಅಸಮಾನತೆ
   (D) ಬೆಲೆಯಲ್ಲಿ ಅಸಮಾನತೆ

12. "ಹಿಸ್ಟೋರಿಕಲ್ ಟ್ರಾನ್ಸ್‌ಫಾರ್ಮೇಷನ್ ಆಫ್ ಇಕನಾಮಿಕ್ ಡೆವಲಪ್‌ಮೆಂಟ್ ಇನ್‌ಟು ಡಿಫರೆಂಟ್ ಸಕೆಸಿವ್ ಸ್ಟೇಜಸ್ ಆಫ್ ಡೆವಲಪ್‌ಮೆಂಟ್" (ಅಭಿವೃದ್ಧಿಯ ವಿವಿಧ ಅನುಕ್ರಮ ಹಂತಗಳಲ್ಲಿ ಆರ್ಥಿಕ ಅಭಿವೃದ್ಧಿಯ ಐತಿಹಾಸಿಕ ಪರಿವರ್ತನ) ಎಂಬ ಅಧ್ಯಯನವನ್ನು 1960 ರಲ್ಲಿ ಯಾರು ಪ್ರಕಟ ಮಾಡಿದರು ?
   (A) ಜಿ.ಎಮ್. ಮೇಯರ್
   (B) ಎಮ್. ಎಲ್. ಝಿಂಗನ್
   (C) ಮೈಕೇಲ್ ಪಿ. ಟೋಡರೋ
   (D) ಡಬ್ಲ್ಯೂ.ಡಬ್ಲ್ಯೂ. ರೋಸ್ಟೋ

13. "ಮಾಲ್ಥಸ್‌ನ ಸೆರೆ" (ಮಾಲ್ಥೂಸಿಯನ್ ಟ್ರ್ಯಾಪ್) ಎಂದರೆ
   (A) ಜನಸಂಖ್ಯಾ ಬೆಳವಣಿಗೆಯು ಹಣದ ಪೂರೈಕೆಯ ಬೆಳವಣಿಗೆಯನ್ನು ಹಿಂದಿಕ್ಕುತ್ತದೆ
   (B) ಜನಸಂಖ್ಯಾ ಬೆಳವಣಿಗೆಯು ಶ್ರಮದ ಪೂರೈಕೆಯ ಬೆಳವಣಿಗೆಯನ್ನು ಹಿಂದಿಕ್ಕುತ್ತದೆ
   (C) ಜನಸಂಖ್ಯಾ ಬೆಳವಣಿಗೆಯು ಋಣದ ಪೂರೈಕೆಯ ಬೆಳವಣಿಗೆಯನ್ನು ಹಿಂದಿಕ್ಕುತ್ತದೆ
   (D) ಜನಸಂಖ್ಯಾ ಬೆಳವಣಿಗೆಯು ಆಹಾರದ ಪೂರೈಕೆಯ ಬೆಳವಣಿಗೆಯನ್ನು ಹಿಂದಿಕ್ಕುತ್ತದೆ

14. ಶುಂಪೀಟರ್‌ನ ಪುಸ್ತಕ 'ದ ಥಿಯರಿ ಆಫ್ ಇಕನಾಮಿಕ್ ಡೆವಲಪ್‌ಮೆಂಟ್' ಮೊದಲ ಬಾರಿಗೆ ಜರ್ಮನ್‌ನಲ್ಲಿ ಪ್ರಕಟಿತವಾದ ವರ್ಷ
   (A) 1911
   (B) 1912
   (C) 1910
   (D) 1909



www.kpsvaani.com

Scanned by CamScanner

15. ಆರ್ಥಿಕ ಅಭಿವೃದ್ಧಿಗೆ ಯಾವುದು ಬಹುಮುಖ್ಯವಾಗಿದೆ ?

(A) ಉತ್ತಮ ನೇತೃತ್ವ
(B) ಉತ್ತಮ ರಾಜಕೀಯ ಪದ್ಧತಿ
(C) ಉತ್ತಮ ಸಾಮಾಜಿಕ ವ್ಯವಸ್ಥೆ
(D) ಉತ್ತಮ ಪ್ರಶಾಸನ

16. ಒಟ್ಟಾಗಿರದ ದತ್ತಾಂಶಗಳ ಸಂದರ್ಭದಲ್ಲಿ ಮೇಲಿಂದ ಮೇಲೆ ಸಂಭವಿಸುವ ಮೌಲ್ಯಕ್ಕೆ ಹೀಗೆಂದು ಕರೆಯುವರು

(A) ಬಹುಳಕ
(B) ಮಧ್ಯಕ
(C) ಸರಾಸರಿ
(D) ಹರಾತ್ಮಕ ಸರಾಸರಿ

17. ಸರಾಸರಿ – ಬಹುಳಕ = 3 (ಸರಾಸರಿ – ಮಧ್ಯಕ) ಎಂಬ ಸಮೀಕರಣವು ಇದನ್ನು ಎಣಿಸಲು ಉಪಯೋಗಿತವಾಗುತ್ತದೆ

(A) ಜ್ಯಾಮಿತೀಯ ಸರಾಸರಿ
(B) ಹರಾತ್ಮಕ ಸರಾಸರಿ
(C) ಬಹುಳಕ
(D) ಪುನರಾವರ್ತನ

18. ವಿಪರೀತ ಮೌಲ್ಯಗಳಿಂದ ತಿರುಚಲ್ಪಟ್ಟ ಸಾಂಖ್ಯಿಕಕ್ಕೆ ಹೀಗೆನ್ನುತ್ತಾರೆ

(A) ಮಧ್ಯಕ
(B) ಬಹುಳಕ
(C) ಸರಾಸರಿ
(D) ಪುನರಾವರ್ತಗಳು

19. ಯಾವುದು ನೈಜ ಸಂಖ್ಯೆಯೆಂದು ಸ್ವೀಕಾರಾರ್ಹವಾಗಿದೆಯೋ ಮತ್ತು ಯಾವುದು ಸರಿಸುಮಾರು ಅಂದಾಜು ಎಂದು ಪರಿಗಣಿಸಲ್ಪಟ್ಟಿದೆಯೋ ಇವುಗಳ ನಡುವಿನ ಅಂತರವನ್ನು ಹೀಗೆನ್ನುತ್ತಾರೆ

(A) ಪರಿಮಿತಿ (ರೇಂಜ್)
(B) ಪ್ರಮಾದ
(C) ಮಧ್ಯಕ
(D) ಬಹುಳಕ

20. ಕೆಲವು ಮಾಹಿತಿಗಳನ್ನು ಪರಿಪೂರ್ಣ ನಮೂನೆಗಳಿಂದ ಮತ್ತು ಕೆಲವು ಹೆಚ್ಚುವರಿ ಮಾಹಿತಿಗಳನ್ನು ಪರಿಪೂರ್ಣ ನಮೂನೆಗಳ ಉಪ-ನಮೂನೆಗಳಿಂದ ಕಲೆಹಾಕುವುದನ್ನು ಹೀಗೆನ್ನಬಹುದು

(A) ಬಹು ಮಜಲು ನಮೂನೆ
(B) ಸ್ತರೀಕೃತ ನಮೂನೆ
(C) ಯಾದೃಚ್ಛಿಕ ನಮೂನೆ
(D) ಗುಂಪು ನಮೂನೆ

21. ಹೆಕ್ಸ್ಚರ್ ಮತ್ತು ಓಲೀನ್‌ನ ಅಂತರ್‌ರಾಷ್ಟ್ರೀಯ ವ್ಯಾಪಾರದ ಸಿದ್ಧಾಂತದ ಪ್ರಾಯೋಗಿಕ ಪರೀಕ್ಷೆ ಇವರಿಂದ ಮಾಡಲ್ಪಟ್ಟಿತು

(A) ಪಿ.ಎ. ಸ್ಯಾಮ್ಯುಯಲ್‌ಸನ್
(B) ಜಿ.ವಿ. ಹೇಬರ್‌ಲರ್
(C) ಡಬ್ಲ್ಯು.ಡಬ್ಲ್ಯು. ಲೀಯಾನ್‌ಟಿಫ್
(D) ಆರ್. ನರ್ಕ್ಸ್

ಚಿತ್ತು ಬರಹಕ್ಕಾಗಿ ಸ್ಥಳ / SPACE FOR ROUGH WORK



www.kpsvaani.com
Scanned by CamScanner

22. ವ್ಯಾಪಾರದ ನಿಬಂಧಗಳು ನಿರ್ದೇಶಿಸುವುದು
 (A) ರಾಷ್ಟ್ರದ ಆಮದಿನ ಬೆಲೆಗೆ ರಫ್ತಿನ ಬೆಲೆಯ ಅನುಪಾತ
 (B) ರಾಷ್ಟ್ರದ ರಫ್ತಿನ ಮಿಗತೆಗೆ ರಫ್ತಿನ ಅನುಪಾತ
 (C) ಸ್ವದೇಶದ ಉತ್ಪಾದನೆಗೆ ರಾಷ್ಟ್ರದ ರಫ್ತಿನ ಅನುಪಾತ
 (D) ರಫ್ತಿನ ಸ್ವದೇಶಿ ಬೆಲೆಗೆ ರಾಷ್ಟ್ರೀಯ ರಫ್ತಿನ ಅನುಪಾತ

23. ಆದರ್ಶ ಸುಂಕವು
 (A) ಜನರ ಕ್ಷೇಮಾಭಿವೃದ್ಧಿಯನ್ನು ಕನಿಷ್ಠಗೊಳಿಸುತ್ತದೆ
 (B) ಜನರ ಕ್ಷೇಮಾಭಿವೃದ್ಧಿಯನ್ನು ಗರಿಷ್ಠಗೊಳಿಸುತ್ತದೆ
 (C) ಅನುಭೋಗದ ಮಟ್ಟವನ್ನು ಗರಿಷ್ಠಗೊಳಿಸುತ್ತದೆ
 (D) ಉತ್ಪಾದನೆಯ ಮಟ್ಟವನ್ನು ಗರಿಷ್ಠಗೊಳಿಸುತ್ತದೆ

24. ವಿದೇಶೀ ವಿನಿಮಯದ ದರವು
 (A) ವಿದೇಶೀ ಹಣದ ಸ್ಥಳೀಯ ಮೌಲ್ಯ
 (B) ಸ್ವದೇಶೀ ಹಣದ ಸ್ಥಳೀಯ ಮೌಲ್ಯ
 (C) SDR's ಗಳ ಸ್ಥಳೀಯ ಮೌಲ್ಯ
 (D) ಡಾಲರ್‌ನ ಸ್ಥಳೀಯ ಮೌಲ್ಯ

25. ಲೀಯಾನ್‌ಟಿಫ್‌ನ ವಿರೋಧಾಭಾಸವನ್ನು ಸಮರ್ಥಿಸಿದವರು
 (A) B.S. ಮಿನ್ಹಾಸ್
 (B) C.P. ಕಿಂಡೆಲ್‌ಬರ್ಗರ್
 (C) M.P. ಟೋಡಾರೋ
 (D) N.S. ಬುಕನನ್

26. ಪರಿಸರವು ಒಂದು
 (A) ಶುದ್ಧ ಸಾರ್ವಜನಿಕ ಸರಕು
 (B) ಖಾಸಗಿ ಸರಕು
 (C) ಅರ್ಹ ಸರಕು
 (D) ಶೀಘ್ರವಾಗಿ ಖರ್ಚಾಗುವ ಸರಕು

27. ಈ ಕೆಳಗಿನ ಯಾವುದರ ಮೇಲಿನ ವೆಚ್ಚವು ಆರ್ಥಿಕ ಮೂಲಭೂತ ಸೌಕರ್ಯ (ಇಕನಾಮಿಕ್ಸ್ ಇನ್‌ಫ್ರಾಸ್ಟ್ರಕ್ಚರ್) ಎಂದು ಪರಿಗಣಿಸಲ್ಪಡುತ್ತದೆ ?
 (A) ಶಿಕ್ಷಣ
 (B) ಆರೋಗ್ಯ
 (C) ನೀರಾವರಿ
 (D) ಉನ್ನತ ಶಿಕ್ಷಣ

28. ದ್ರವ್ಯದೊಲವಿನ ಸಿದ್ಧಾಂತವನ್ನು ಮಂಡಿಸಿದವರು
 (A) ಕಾರ್ಲ್ ಮಾರ್ಕ್ಸ್
 (B) ಜೆ.ಎಮ್. ಕೇನ್ಸ್
 (C) ಡೇವಿಡ್ ರಿಕಾರ್ಡೋ
 (D) ಜೆ.ಬಿ.ಸೇ

ಚಿತ್ತು ಬರಹಕ್ಕಾಗಿ ಸ್ಥಳ / SPACE FOR ROUGH WORK



www.kpsvaani.com

Scanned by CamScanner

29. ಅತ್ಯಧಿಕ ತೆರಿಗೆಯು ವಿಧಿಸಲ್ಪಡುವುದು

(A) ಹಣದಿಳಿತವನ್ನು ಪರಿಹರಿಸಲು

(B) ಹಣದುಬ್ಬರವನ್ನು ಹತೋಟಿಯಲ್ಲಿಡಲು

(C) ವ್ಯಕ್ತಿಯ ಕೊಳ್ಳುವ ಶಕ್ತಿಯನ್ನು ಅಧಿಕಗೊಳಿಸಲು

(D) ಆರ್ಥಿಕ ಚಟುವಟಿಕೆಗಳನ್ನು ಹೆಚ್ಚಿಸಲು

30. ಸಾರ್ವಜನಿಕ ಸರಕಿಗಾಗಿ ಬೇಡಿಕೆಯು ಏಕತ್ರಗೊಳ್ಳುವುದು

(A) ಲಂಬವಾಗಿ (B) ಸಮತಲವಾಗಿ

(C) (A) ಮತ್ತು (B) ಎರಡೂ (D) ಡಯಗೋನಲ್ ಆಗಿ

31. ಭೌತಿಕ ಬದುಕಿನ ಗುಣವತ್ತತೆಯ ಪರಿಕಲ್ಪನೆ ಫಿಜಿಕಲ್ ಕ್ವಾಲಿಟಿ ಆಫ್ ಲೈಫ್ ಇಂಡೆಕ್ಸ್ (PQLI) ಅಭಿವೃದ್ಧಿಪಡಿಸಿದವರು

(A) ಡೋಮರ್ (B) ಹೆರಾಡ್

(C) ಶುಂಪೀಟರ್ (D) ಮಾರಿಸ್ ಡೇವಿಸ್ ಮಾರಿಸ್

32. ಇದು ಮಾನವ ಅಭಿವೃದ್ಧಿ ಸೂಚ್ಯಂಕ (HDI)

(A) $\text{ಮೌಲ್ಯ ಸೂಚ್ಯಂಕ} = \dfrac{X_1 \text{ ನ ವಾಸ್ತವಿಕ ಮೌಲ್ಯ} - X_1 \text{ ನ ಕನಿಷ್ಠ ಮೌಲ್ಯ}}{X_1 \text{ ನ ಗರಿಷ್ಠ ಮೌಲ್ಯ} - X_1 \text{ ನ ಕನಿಷ್ಠ ಮೌಲ್ಯ}}$

(B) $\text{ಮೌಲ್ಯ ಸೂಚ್ಯಂಕ} = \dfrac{X_1 \text{ ನ ಕನಿಷ್ಠ ಮೌಲ್ಯ} - X_1 \text{ ನ ವಾಸ್ತವಿಕ ಮೌಲ್ಯ}}{X_1 \text{ ನ ಗರಿಷ್ಠ ಮೌಲ್ಯ} - X_1 \text{ ನ ಕನಿಷ್ಠ ಮೌಲ್ಯ}}$

(C) (A) ಯು ತಪ್ಪಾಗಿದೆ ಮತ್ತು (B) ಯು ಸರಿಯಾಗಿದೆ

(D) (A) ಯೂ ಅಲ್ಲ, (B) ಯೂ ಅಲ್ಲ

33. ಕನಿಷ್ಠ ಜೀವನ ಮಟ್ಟದ ಮಾಪನ ಯಾವುದು ?

(A) ವಾಸ್ತವಿಕ ಆದಾಯ ಅಥವಾ ವ್ಯಯ (B) ತಲಾ ಉಳಿತಾಯಗಳು

(C) ತಲಾ ಹೂಡಿಕೆ (D) ತಲಾ ಉತ್ಪಾದಕತೆ

34. "ವೈ ಪೂವರ್ ಪೀಪಲ್ ಸ್ಟೇ ಪೂವರ್" ನ ಲೇಖಕರು

(A) ಲಿಟಲ್ (B) ನ್ಯಾರ್ದೋ (C) ಮಿರ್ಡಲ್ (D) ಮೈಕೆಲ್ ಲಿಪ್ಟನ್





www.kpsvaani.com

Scanned by CamScanner

35. "ಬಡತನದ ವಿಷವರ್ತುಲ"ದ ಮೂಲವು

(A) ಕಡಿಮೆ ತಲಾದಾಯ

(B) ಕೆಳಮಟ್ಟದ ತಲಾ ಉಳಿತಾಯ

(C) ಕಡಿಮೆ ಉತ್ಪಾದಕತೆ

(D) ಕೆಳಮಟ್ಟದ ಬಂಡವಾಳ ಶೇಖರಣೆ

36. ಹೂಡಿಕೆಯ ಗುಣಕವನ್ನು ಹೀಗೆ ವ್ಯಾಖ್ಯಾನಿಸಬಹುದು

(A) ಆದಾಯದಲ್ಲಿನ ವ್ಯತ್ಯಾಸ ಮತ್ತು ಉಳಿತಾಯದ ವ್ಯತ್ಯಾಸದ ನಡುವಣ ನಿಷ್ಪತ್ತಿ

(B) ಆದಾಯದಲ್ಲಿನ ವ್ಯತ್ಯಾಸ ಮತ್ತು ಅನುಭೋಗದ ವ್ಯತ್ಯಾಸದ ನಡುವಣ ನಿಷ್ಪತ್ತಿ

(C) ಆದಾಯದಲ್ಲಿನ ವ್ಯತ್ಯಾಸ ಮತ್ತು ಹೂಡಿಕೆಯ ವ್ಯತ್ಯಾಸದ ನಡುವಣ ನಿಷ್ಪತ್ತಿ

(D) ಒಟ್ಟು ಆದಾಯ ಮತ್ತು ಒಟ್ಟು ಹೂಡಿಕೆ ನಡುವಣ ನಿಷ್ಪತ್ತಿ

37. 1/1-MPC ಯನ್ನು ಈ ಕೆಳಗಿನವುಗಳನ್ನು ಅಂದಾಜಿಸಲು ಉಪಯೋಗಿಸುತ್ತಾರೆ.

(A) ಹೂಡಿಕೆಯ ಗುಣಕ

(B) ಉದ್ಯೋಗದ ಗುಣಕ

(C) ಒಟ್ಟು ಆದಾಯ

(D) ಒಟ್ಟು ಖರ್ಚು

38. MPC ಯು ಒಂದು ಆಗಿದ್ದಾಗ ಗುಣಕದ ಬೆಲೆಯೇನು ?

(A) ಅನಂತ

(B) ಒಂದು

(C) ಒಂದಕ್ಕಿಂತ ಕಡಿಮೆ

(D) ಒಂದಕ್ಕಿಂತ ಹೆಚ್ಚು

39. ಆದಾಯದ ಬೇಡಿಕೆಯ ಸಲುವಾಗಿ ಮಾಡಿದ ಹೂಡಿಕೆಯನ್ನು ಹೀಗೆನ್ನಲಾಗುತ್ತದೆ

(A) ಸ್ವಾಯತ್ತತೆ ಹೂಡಿಕೆ

(B) ಪ್ರೇರಿತ ಹೂಡಿಕೆ

(C) ಒಟ್ಟು ಹೂಡಿಕೆ

(D) ಸಾರ್ವಜನಿಕ ಹೂಡಿಕೆ

40. ಹಣದುಬ್ಬರವಿದ್ದಾಗ, ಹಣದ ಮೌಲ್ಯವು

(A) ಸ್ಥಿರವಾಗಿ ಉಳಿಯುತ್ತದೆ

(B) ಇಳಿಮುಖವಾಗುತ್ತದೆ

(C) ಮೇಲ್ಮುಖವಾಗುತ್ತದೆ

(D) ಕಡಿಮೆ ದರದಲ್ಲಿ ಹೆಚ್ಚಳವಾಗುತ್ತದೆ

41. ಹೆರಾಡ್‌ನ ಪ್ರಕಾರ "ನಿರೀಕ್ಷಿತ ಬೆಳವಣಿಗೆ ದರ" ಎಂದರೆ

(A) ಬೆಳವಣಿಗೆ ದರದ ಪೂರ್ಣ ಸಾಮರ್ಥ್ಯ ದರ

(B) ಸಮತೋಲಿತ ಬೆಳವಣಿಗೆ ದರ

(C) ಉದ್ಯೋಗರಹಿತ ಬೆಳವಣಿಗೆ ದರ

(D) ಭವಿಷ್ಯರಹಿತ ಬೆಳವಣಿಗೆ ದರ

ಚಿತ್ತು ಬರಹಕ್ಕಾಗಿ ಸ್ಥಳ / SPACE FOR ROUGH WORK

A

www.kpsvaani.com

Scanned by CamScanner

42. ರೋಸೆನ್‌ಸ್ಟೈನ್ ರೋಡನ್‌ನು ಅವರ "ಬಿಗ್ ಪುಷ್ ಸಿದ್ಧಾಂತ" (ದೊಡ್ಡ ನೂಕು ಸಿದ್ಧಾಂತ)ವನ್ನು ಯಾವ ರೀತಿಯ ಅವಿಭಾಜ್ಯತೆಯ ಮೇಲೆ ಆಧಾರಿಸಿದ್ದಾರೆ ?

(A) ಉತ್ಪಾದನಾ ಕಾರ್ಯದಲ್ಲಿ ಅವಿಭಾಜ್ಯತೆ

(B) ಬೇಡಿಕೆಯಲ್ಲಿ ಅವಿಭಾಜ್ಯತೆ

(C) ಉಳಿತಾಯದ ಪೂರೈಕೆಯಲ್ಲಿ ಅವಿಭಾಜ್ಯತೆ

(D) ಮೇಲಿನ ಎಲ್ಲವೂ

43. ವಿಷಮ ಕನಿಷ್ಠ ಪ್ರಯತ್ನ ಪ್ರಮೇಯವು (ದ ಕ್ರಿಟಿಕಲ್ ಮಿನಿಮಮ್ ಎಫರ್ಟ್ ಥೀಸಿಸ್) ಯಾವ ಅಂಶಗಳ ಮಧ್ಯದ ಸಂಬಂಧದ ಮೇಲೆ ಆಧಾರಿತವಾಗಿದೆ ?

(A) ತಲಾ ಆದಾಯ, ಜನಸಂಖ್ಯಾ ಬೆಳವಣಿಗೆ ಮತ್ತು ಹೂಡಿಕೆ

(B) ರಾಷ್ಟ್ರೀಯ ಆದಾಯ, ತಾಂತ್ರಿಕತೆ ಮತ್ತು ಉಳಿತಾಯಗಳು

(C) ವಿದೇಶೀ ನೇರ ಹೂಡಿಕೆ, ಜನಸಂಖ್ಯಾ ಒತ್ತಡ ಮತ್ತು ಖಾತಾ ಹೂಡಿಕೆ (ಪೋರ್ಟ್‌ಫೋಲಿಯೋ ಇನ್‌ವೆಸ್ಟ್‌ಮೆಂಟ್)

(D) ಹಸಿರು ಕ್ಷೇತ್ರದ ಹೂಡಿಕೆ, ಆರ್ಥಿಕ ಬೆಳವಣಿಗೆ ಮತ್ತು ತಲಾದಾಯ

44. "ಶೂನ್ಯ ಆಧಾರ ಆಯವ್ಯಯ" (ಝೀರೋ ಬೇಸ್ ಬಜೆಟಿಂಗ್) ಎಂದರೇನು ?

(A) ಅನಂತ ಕೊರತೆ ಹಣಕಾಸು

(B) ಪ್ರತಿ ಬಾರಿಯೂ ಹೊಸ ಆಯವ್ಯಯದ ತಯಾರಿ

(C) ಹೊಸ ಕಾರ್ಯಕ್ರಮಗಳಿಗೆ ಅಂಗೀಕಾರವಿಲ್ಲ

(D) ಉತ್ಪಾದನಾ ರಹಿತ ವೆಚ್ಚದಲ್ಲಿ ಮೊಟಕುಗೊಳಿಸದಿರುವುದು

45. ತೆರಿಗೆಯ ಅಂತಿಮ ಬೀಳುವಿಕೆ (ಇನ್ಸಿಡೆನ್ಸ್ ಟ್ಯಾಕ್ಸ್) ಎಂದರೆ

(A) ಪ್ರಾಥಮಿಕ ಹೊರೆ (B) ಅಂತಿಮ ಹಣದ ಹೊರೆ

(C) ತೆರಿಗೆಯ ಹೊರೆ (D) ಯಾವುದೇ ಹೊರೆ ಇಲ್ಲ

46. ಒಟ್ಟು ರಾಷ್ಟ್ರೀಯ ಉತ್ಪನ್ನವು ಒಟ್ಟು ಉತ್ಪಾದನಾಂಗಗಳ (factor cost) ವೆಚ್ಚವನ್ನು ಪರೋಕ್ಷ ತೆರಿಗೆಗಳಿಗೆ ಕೂಡಿಸಿ ಸವಕಳಿಯಿಂದ ಕಳೆಯುವುದನ್ನು ಹೀಗೆ ತಿಳಿಯಬಹುದು

(A) GNP ಯು ಮಾರುಕಟ್ಟೆ ಬೆಲೆಯಲ್ಲಿ (B) GNP ಯು ಸ್ಥಿರ ಬೆಲೆಯಲ್ಲಿ

(C) NNP ಯು ಮಾರುಕಟ್ಟೆ ಬೆಲೆಯಲ್ಲಿ (D) NNP ಯು ಸ್ಥಿರ ಬೆಲೆಯಲ್ಲಿ



www.kpsvaani.com

Scanned by CamScanner

47. ಒಂದು ನಿರ್ದಿಷ್ಟ ವರ್ಷದ ಬೆಲೆಗಳ ಮೂಲಕ ರಾಷ್ಟ್ರೀಯ ಉತ್ಪನ್ನವನ್ನು ಅಳೆದಾಗ ಅದನ್ನು ಹೀಗೆ ಉಲ್ಲೇಖಿಸಬಹುದು

(A) ರಾಷ್ಟ್ರೀಯ ಉತ್ಪನ್ನವನ್ನು ಸ್ಥಿರ ಬೆಲೆಯಲ್ಲಿ ಮಾಪನ ಮಾಡುವುದು

(B) ನೈಜ ರಾಷ್ಟ್ರೀಯ ಉತ್ಪನ್ನ

(C) (A) ಮತ್ತು (B) ಎರಡೂ ಸರಿ

(D) ಕೊರತೆಯ ಅರ್ಥವ್ಯವಸ್ಥೆ

48. ಈ ಕೆಳಗಿನ ಅಂಶಗಳಲ್ಲಿ ಯಾವುದು ರಾಷ್ಟ್ರೀಯ ಆದಾಯದಲ್ಲಿ ಒಳಗೊಂಡಿಲ್ಲ ?

(A) ಕೂಲಿಗಳು ಮತ್ತು ವೇತನಗಳು

(B) ಸಾರ್ವಜನಿಕ ಋಣದಿಂದ ಬಡ್ಡಿ

(C) ಮಾರಾಟ ತೆರಿಗೆ ಆದಾಯ

(D) ಸಾರ್ವಜನಿಕ ಕ್ಷೇತ್ರದ ಉದ್ಯಮಗಳ ಲಾಭ

49. ಒಂದು ನಕಾಶೆಯಲ್ಲಿ ನಿರುದ್ಯೋಗದ ಮಟ್ಟವನ್ನು ಸಮತಲ ಅಕ್ಷದಲ್ಲಿ ಮತ್ತು ಕೂಲಿಯ ದರವನ್ನು ಲಂಬ ಅಕ್ಷದಲ್ಲಿ ಗುರುತಿಸಲ್ಪಟ್ಟ ನಕಾಶೆಯನ್ನು ಹೀಗೆನ್ನಬಹುದು

(A) ಒಟ್ಟು ಉತ್ಪಾದಕತಾ ರೇಖೆ

(B) ಸಾಧಾರಣ ಸಂಭಾವ್ಯತಾ ರೇಖೆ

(C) ಲೊರೆನ್ಸ್ ರೇಖೆ

(D) ಫಿಲಿಪ್ಸ್ ರೇಖೆ

50. ಆರ್ಥಿಕತೆಯ ನಾಲ್ಕು ವಲಯಗಳಲ್ಲಿ, ರಾಷ್ಟ್ರೀಯ ಆದಾಯವನ್ನು ಹೀಗೆ ಅಳೆಯಬಹುದು

(A) Y = C + I + G + X – M

(B) Y = C + I + G + T

(C) Y = C + I + G – X + M

(D) Y = C + I + T + X – M

51. ಕಾರ್ಲ್ ಮಾರ್ಕ್ಸ್ ಪ್ರಸಿದ್ಧವಾದ ಪುಸ್ತಕ 'ದಾಸ್ ಕ್ಯಾಪಿಟಲ್ ' ಬರೆದ ವರ್ಷ

(A) 1864 (B) 1865 (C) 1866 (D) 1867

52. ಲೂಯಿಸ್ ಮಾದರಿಯಲ್ಲಿ ಮೂಲ ಪರಿಕಲ್ಪನೆ ಯಾವುದು ?

(A) ಕೈಗಾರಿಕಾ ವಲಯದಲ್ಲಿರುವ ಕೂಲಿಯು ಕೃಷಿ ವಲಯದಲ್ಲಿರುವ ಕೂಲಿಗಿಂತ ಕಡಿಮೆಯಾಗಿದೆ

(B) ಕೈಗಾರಿಕಾ ವಲಯದಲ್ಲಿರುವ ಕೂಲಿಯು ಕೃಷಿ ವಲಯದಲ್ಲಿರುವ ಕೂಲಿಗಿಂತ ಹೆಚ್ಚಾಗಿದೆ

(C) ಸೇವಾ ವಲಯದಲ್ಲಿರುವ ಕೂಲಿಯು ಕೈಗಾರಿಕಾ ವಲಯದಲ್ಲಿರುವ ಕೂಲಿಗಿಂತ ಹೆಚ್ಚಾಗಿದೆ

(D) ತೃತೀಯ ವಲಯದಲ್ಲಿರುವ ಕೂಲಿಯು ಕೃಷಿವಲಯದಲ್ಲಿರುವ ಕೂಲಿಗಿಂತ ಹೆಚ್ಚಾಗಿದೆ

ಚಿತ್ತು ಬರಹಕ್ಕಾಗಿ ಸ್ಥಳ / SPACE FOR ROUGH WORK

A

www.kpsvaani.com

Scanned by CamScanner

53. 'ಆ್ಯನ್ ಎಸ್ಸೇ ಇನ್ ಡೈನಮಿಕ್ ಥಿಯರಿ' ಎಂಬ ಲೇಖನವನ್ನು 1939 ರಲ್ಲಿ ಯಾರು ಪ್ರಕಟಿಸಿದರು ?
(A) ಹೆರಾಡ್ (B) ಡೋಮರ್ (C) ಹಿಗ್ಗಿನ್ಸ್ (D) ಮೇಯರ್

54. ಆರ್ಥರ್ ಡಬ್ಲ್ಯೂ. ಲೂಯಿಸ್‌ನ ಪ್ರಕಾರ, ಸಾಂಪ್ರದಾಯಿಕ ಇಬ್ಬಗೆಯ ಆರ್ಥಿಕತೆಯ ಮಾದರಿ ಎಂದರೆ
(A) ಸಾರ್ವಜನಿಕ ಮತ್ತು ಖಾಸಗಿ ವಲಯಗಳ ಸಹ ಅಸ್ತಿತ್ವ
(B) ಆಧುನಿಕ ವಲಯ ಮತ್ತು ಜೀವನಾಧಾರದ ವಲಯಗಳ ಸಹ ಅಸ್ತಿತ್ವ
(C) ಕೃಷಿ ಮತ್ತು ಸೇವಾ ವಲಯಗಳ ಸಹ ಅಸ್ತಿತ್ವ
(D) ಎಲ್ಲಾ ವಲಯಗಳ ಸಹ ಅಸ್ತಿತ್ವ

55. ಮಾಲ್ಥಸ್‌ನ ಜನಸಂಖ್ಯಾ ಸಿದ್ಧಾಂತವು ಪ್ರತಿಪಾದಿತವಾದದ್ದು ಈ ವರ್ಷದಲ್ಲಿ
(A) 1796 (B) 1797 (C) 1798 (D) 1799

56. ಇದರ ಮೇಲೆ ಹೇಬರ್‌ಲರ್‌ನ ಸದಾವಕಾಶ ವೆಚ್ಚ (ಆಪರ್ಚುನಿಟಿ ಕಾಸ್ಟ್) ಸಿದ್ಧಾಂತವು ಆಧಾರಿತವಾಗಿರುವುದು
(A) ಆಸ್ಟ್ರಿಯನ್ ತತ್ವ ಸಿದ್ಧಾಂತ (B) ಕೈನೇಶಿಯನ್ ತತ್ವ ಸಿದ್ಧಾಂತ
(C) ಪಿಗುವಿನ ತತ್ವ ಸಿದ್ಧಾಂತ (D) ಎಪಿಕ್ಯೂರಿಯನ್ ತತ್ವ ಸಿದ್ಧಾಂತ

57. ವಿದೇಶೀ ವಿನಿಮಯ ವಹಿವಾಟಿನಲ್ಲಿ ವಿನಿಮಯ ದರವು ಕರಾರಿನ ಮೂರು ತಿಂಗಳ ನಂತರದ ಪಾವತಿ ಅಥವಾ ವಿದೇಶೀ ವಿನಿಮಯದಲ್ಲಿ ಪಾವತಿ ಸ್ವೀಕಾರ ಕ್ರಮಕ್ಕೆ ಹೀಗೆನ್ನುತ್ತಾರೆ
(A) ಹೆಡ್ಜಿಂಗ್ (B) ತಕ್ಷಣ ವಿನಿಮಯ ದರ
(C) ಮುಂಗಡ ವಿನಿಮಯ ದರ (D) ಸಟ್ಟಾ ದರ

58. ಅಂತರ್‌ರಾಷ್ಟ್ರೀಯ ಅರ್ಥಶಾಸ್ತ್ರವು
(A) ಅನ್ವಯಿಕ ಅರ್ಥಶಾಸ್ತ್ರ
(B) ವ್ಯವಹಾರ ಅರ್ಥಶಾಸ್ತ್ರ
(C) ನಿರ್ವಹಣಾ ಅರ್ಥಶಾಸ್ತ್ರ
(D) ಅರ್ಥಶಾಸ್ತ್ರದ ಇತರ ಶಾಖೆಗಳಿಂದ ಸ್ವತಂತ್ರವಾಗಿದೆ

59. ಉತ್ಪಾದನಾಂಗಗಳ ಕೊಡುಗೆ (ಫ್ಯಾಕ್ಟರ್ ಎಂಡೋಮೆಂಟ್)
(A) ಎಲ್ಲಾ ಸರಕುಗಳ ಲಭ್ಯತೆ
(B) ಉತ್ಪಾದನಾಂಗಗಳಲ್ಲಿ ಆಧಿಕ್ಯ
(C) ಔದ್ಯಮಿಕ ನೈಪುಣ್ಯತೆಯಲ್ಲಿ ಆಧಿಕ್ಯ
(D) ವಿದೇಶೀ ವಿನಿಮಯದಲ್ಲಿ ಆಧಿಕ್ಯ

ಚಿತ್ತು ಬರಹಕ್ಕಾಗಿ ಸ್ಥಳ / SPACE FOR ROUGH WORK



www.kpsvaani.com

Scanned by CamScanner

60. ಉತ್ಪಾದನಾಂಗಗಳ ಸಮಾನ ಮೌಲ್ಯ ಸಿದ್ಧಾಂತ (ಫ್ಯಾಕ್ಟರ್ ಪ್ರೈಸ್ ಈಕ್ವಲೈಸಿಂಗ್ ಥಿಯರಿ)ವನ್ನು ಮಂಡಿಸಿದವರು

(A) ಹೆಕ್ಸರ್–ಓಲೀನ್

(B) ಲಿಯೋನ್‌ಟಿಫ್

(C) ಪೌಲ್ ಎ. ಸ್ಯಾಮ್ಯುಯೆಲ್‌ಸನ್

(D) ಹೇಬರ್‌ಲರ್

61. ಎಲ್ಲಾ ಮೌಲ್ಯಗಳ ಲಘುಗಣಕ (log) ಅನ್ನು ಕೂಡಿಸಿ, ಇದನ್ನು 'n' ನಿಂದ ಭಾಗಿಸಿ ಮತ್ತು ಮೌಲ್ಯದ ಪ್ರತಿಘಾತ ಅನ್ನು ತೆಗೆದುಕೊಂಡಾಗ ನಾವು ಪಡೆಯುವುದು

(A) ಮಧ್ಯಕ

(B) ಗುಣೋತ್ತರ ಸರಾಸರಿ

(C) ಹರಾತ್ಮಕ ಸರಾಸರಿ (ಹಾರ್ಮೋನಿಕ್ ಮೀನ್)

(D) ಬಹುಳಕ

62. ಮೌಲ್ಯಗಳ ವ್ಯುತ್ಕ್ರಮಗಳನ್ನು ಕೂಡಿಸಿದಾಗ ಮತ್ತು ಅಂಶಗಳ ಸಂಖ್ಯೆಯಿಂದ ಮೊತ್ತವನ್ನು ಭಾಗಿಸಿದಾಗ, ನಾವು ಪಡೆಯುವುದು

(A) ಗುಣೋತ್ತರ ಸರಾಸರಿ

(B) ಮಧ್ಯಕ

(C) ಹರಾತ್ಮಕ ಸರಾಸರಿ

(D) ಬಹುಳಕ

63. ಒಂದು ವೇಳೆ ನಾವು ನೌಕರರ, ಕಾರ್ಮಿಕರ ಮುಂತಾದವರ ವೇತನವನ್ನು ಅಳೆಯುವುದಾದರೆ, ಆ ವೇತನವು

(A) ಚರ

(B) ಸಮೀಕ್ಷೆ

(C) ಯಾದೃಚ್ಛಿಕ ನಮೂನೆ

(D) ಕ್ರಮಬದ್ಧವಾದ ಮಾದರಿ

64. ತಾರತಮ್ಯ ರಹಿತವಾಗಿದೆ ಎಂದು ನಮಗೆ ಖಾತ್ರಿಯಾಗುವ ಒಂದೇ ಒಂದು ನಮೂನೆಯ ವಿಧಾನವೆಂದರೆ

(A) ಯಾದೃಚ್ಛಿಕ ನಮೂನೆ

(B) ಜನಗಣತಿ

(C) ಕ್ರಮಬದ್ಧವಾದ ನಮೂನೆ

(D) ಸ್ತರೀಕೃತ ನಮೂನೆ

65. ಒಂದು ಬೀದಿಯ ಪ್ರತಿ 20 ಶೇಕಡಾ ಗೃಹ/ವಸತಿಗಳ ಮೊತ್ತ ಗಣನೆಗೆ ತೆಗೆದುಕೊಳ್ಳುವುದನ್ನು ಹೀಗೆನ್ನುತ್ತಾರೆ

(A) ಜನಗಣತಿ

(B) ಯಾದೃಚ್ಛಿಕ ನಮೂನೆ

(C) ಕ್ರಮಬದ್ಧವಾದ ನಮೂನೆ

(D) ಸಮಷ್ಟಿ

66. ಸಗಟು ಸಂಖ್ಯೆಯಲ್ಲಿರುವ ಪ್ರತಿಯೊಂದು ವಿಷಯವೂ ಸಮಾನವಾಗಿ ಒಳಗೊಳ್ಳುವ ರೀತಿಯಲ್ಲಿ ಸಂಗ್ರಹಿಸುವ ನಮೂನೆಯನ್ನು ಹೀಗೆನ್ನುತ್ತಾರೆ

(A) ಕ್ಷೇತ್ರ ನಮೂನೆ

(B) ಗುಂಪು ನಮೂನೆ

(C) ಜನಗಣತಿ

(D) ಯಾದೃಚ್ಛಿಕ ನಮೂನೆ

ಚಿತ್ತು ಬರಹಕ್ಕಾಗಿ ಸ್ಥಳ / SPACE FOR ROUGH WORK

A

www.kpsvaani.com

Scanned by CamScanner

67. ಯಾವುದೇ (ಒಟ್ಟು) ಸಗಟು ಸಂಖ್ಯೆಯಲ್ಲಿ ಪ್ರತಿಯೊಂದು ಅಂಶವನ್ನು ಪಟ್ಟೀಕರಿಸಲಾಗಿ, ಶೇಕಡಾ 10 ರಷ್ಟು ನಮೂನೆಗಳು ಆಗತ್ಯವಿದ್ದರೆ ನಮೂನೆಗಳನ್ನು ಆಯ್ಕೆ ಮಾಡುವುದಕ್ಕೆ ಹೀಗೆನ್ನುತ್ತಾರೆ

(A) ಜನಗಣತಿ

(B) ಯಾದೃಚ್ಛಿಕ ನಮೂನೆಗಳು

(C) ಕ್ರಮಬದ್ಧವಾದ ನಮೂನೆಗಳು

(D) ಸ್ತರೀಕೃತ ನಮೂನೆಗಳು

68. ಸಂಖ್ಯಾಶಾಸ್ತ್ರದ ಯಾವುದೇ ಒಂದು ಅಂಶದಲ್ಲಿ ಸಂಭವಿಸುವ ಸಂಖ್ಯೆಯನ್ನು ಹೀಗೆನ್ನುತ್ತಾರೆ

(A) ನಮೂನೆ (B) ಆವರ್ತನೆ (C) ಜನಗಣತಿ (D) ಸಮೀಕ್ಷೆ

69. ಸಂದರ್ಶನಕ್ಕೆ ಉಪಯೋಗಿಸುವ ವಿಧಾನ

(A) ವೀಕ್ಷಣೆ (B) ಸಮೀಕ್ಷೆ (C) ಪ್ರಶ್ನಾವಳಿ (D) ಜನಗಣತಿ

70. ಜನನ, ವಿವಾಹಗಳು ಮತ್ತು ಮರಣಕ್ಕೆ ಸಂಬಂಧಿಸಿದ ಅಂಕಿ ಅಂಶಗಳನ್ನು ಹೀಗೆನ್ನುತ್ತಾರೆ

(A) ವೈಟಲ್ ಸ್ಟ್ಯಾಟಿಸ್ಟಿಕ್ಸ್

(B) ಇಕಾನೋಮೆಟ್ರಿಕ್ಸ್ (ಆರ್ಥಿಕ ಸಂಖ್ಯಾಶಾಸ್ತ್ರ)

(C) ಊಹಾತ್ಮಕ ಸಂಖ್ಯಾಶಾಸ್ತ್ರ

(D) ಮೂಲಭೂತ ಸಂಖ್ಯಾಶಾಸ್ತ್ರ

71. ನಿರಪೇಕ್ಷ ಆದಾಯದ ಊಹಾತ್ಮಕ ಸಿದ್ಧಾಂತವು ಈ ಕೆಳಗಿನ ಮೂಲಭೂತ ತತ್ವಕ್ಕೆ ಸೇರಿಸಲಾಗಿದೆ

(A) ಕೇನ್ಸ್‌ನ ಅನುಭೋಗದ ಸಿದ್ಧಾಂತ

(B) ಫ್ರೀಡ್‌ಮ್ಯಾನ್‌ನ ಅನುಭೋಗದ ಸಿದ್ಧಾಂತ

(C) ಅನುಭೋಗದ ಜೀವನ ಚಕ್ರದ ಸಿದ್ಧಾಂತ

(D) ಅನುಭೋಗದ ಡ್ಯುಸೆನ್‌ಬೆರಿ ಸಿದ್ಧಾಂತ

72. ಕೇನೇಶಿಯನ್ ಅನುಭೋಗದ ಸಿದ್ಧಾಂತದಲ್ಲಿ ಸರಾಸರಿ ಅನುಭೋಗದ ಪ್ರವೃತ್ತಿ

(A) ಆದಾಯದ ವೃದ್ಧಿಯೊಂದಿಗೆ ವೃದ್ಧಿಸುತ್ತದೆ

(B) ಆದಾಯದ ವೃದ್ಧಿಯೊಂದಿಗೆ ಕ್ಷೀಣಿಸುತ್ತದೆ

(C) ಆದಾಯ ವೃದ್ಧಿಸಿದಂತೆ ಸ್ಥಿರವಾಗಿ ಉಳಿಯುತ್ತದೆ

(D) ಆದಾಯ ವೃದ್ಧಿಯಾದಂತೆ ಮೊದಲು ವೃದ್ಧಿಸುತ್ತದೆ ಮತ್ತು ನಂತರದಲ್ಲಿ ಇಳಿಮುಖವಾಗುತ್ತದೆ

73. ಸೀಮಾಂತ ಅನುಭೋಗ ಪ್ರವೃತ್ತಿ

(A) ಆದಾಯಕ್ಕೆ ಒಟ್ಟು ಅನುಭೋಗದ ನಡುವಣ ನಿಷ್ಪತ್ತಿ

(B) ಆದಾಯದ ವ್ಯತ್ಯಾಸ ಮತ್ತು ಅನುಭೋಗದ ವ್ಯತ್ಯಾಸದ ನಡುವಣ ನಿಷ್ಪತ್ತಿ

(C) ಆದಾಯದ ವ್ಯತ್ಯಾಸ ಮತ್ತು ಉಳಿತಾಯದ ವ್ಯತ್ಯಾಸದ ನಡುವಣ ನಿಷ್ಪತ್ತಿ

(D) ಉಳಿತಾಯ ಮತ್ತು ಹೂಡಿಕೆಯ ನಡುವಣ ನಿಷ್ಪತ್ತಿ

ಚಿತ್ತು ಬರಹಕ್ಕಾಗಿ ಸ್ಥಳ / SPACE FOR ROUGH WORK

A

www.kpsvaani.com

Scanned by CamScanner

74. ಖಾಯಂ ಆದಾಯದ ಕಲ್ಪನೆಯು ಇವರಿಂದ ಅಭಿವೃದ್ಧಿಗೊಂಡಿತು
(A) ಮಿಲ್ಟನ್ ಫ್ರೀಡ್‌ಮ್ಯಾನ್
(B) ಡ್ಯುಸೆನ್‌ಬೆರಿ
(C) ಕೇನ್ಸ್
(D) ಮಾರ್ಷಲ್

75. ಸಮಗ್ರ ಅರ್ಥಶಾಸ್ತ್ರವು (ಮ್ಯಾಕ್ರೋ ಇಕಾನಾಮಿಕ್ಸ್) ಈ ಕೆಳಗಿನವುಗಳಲ್ಲಿ ಯಾವುದನ್ನು ಅಧ್ಯಯನ ಮಾಡುವುದಿಲ್ಲ?
(A) ಆರ್ಥಿಕ ಚಟುವಟಿಕೆಗಳ ಹಂತಗಳ ನಿರ್ಣಯ
(B) ಬೆಲೆ ಮತ್ತು ಉತ್ಪಾದನಾ ಪ್ರಮಾಣದ ನಿರ್ಣಯ
(C) ಆರ್ಥಿಕ ಏರುಪೇರುಗಳನ್ನು ಉಂಟು ಮಾಡಬಲ್ಲ ಅಂಶಗಳು ಮತ್ತು ಶಕ್ತಿಗಳು
(D) ಸಮಗ್ರ ಮತ್ತು ಚರಗಳ ನಡುವಿನ ಆಂತರಿಕ ಸಂಬಂಧಗಳು

76. ಸಾರ್ವಜನಿಕ ಹಣಕಾಸು ಇದರೊಂದಿಗೆ ವ್ಯವಹರಿಸುವುದು
(A) ಸರಕಾರದ ಖಜಾನೆ ಕಾರ್ಯಗಳು
(B) ಸರಕಾರದ ಹಣಕಾಸಿನ ಕಾರ್ಯಗಳು
(C) ಸರಕಾರದ ವೆಚ್ಚದ ನೀತಿ
(D) ಸರಕಾರದ ಕಂದಾಯದ ನೀತಿ

77. ಈ ಕೆಳಗಿನ ಯಾವುದು ಕೆನೆತ್ ಆರೋನ ಬಹುಮತದಲ್ಲಿ ಸಮಷ್ಟಿಯ ಆಯ್ಕೆಯ ಷರತ್ತು ಅಲ್ಲ?
(A) ಸಾಮಾಜಿಕ ಆಯ್ಕೆಗಳು ನಿರಂಕುಶವಾಗಿರಬಾರದು
(B) ಮತದಾರರಿಗೆ ಮುಕ್ತ ಆಯ್ಕೆಗಳಿವೆ
(C) ಸಾಮಾಜಿಕ ಆಯ್ಕೆಗಳು ವಿಕೃತವಾಗಿಲ್ಲ
(D) ಸಾಮಾಜಿಕ ಆಯ್ಕೆಗಳು ಅಕರ್ಮಕವಾಗಿದೆ

78. ಪ್ರಜಾಪ್ರಭುತ್ವ ಮತದಾನದಲ್ಲಿ ರಾಜಕೀಯ ಸಂವಹನ ವೆಚ್ಚವು ಒಳಗೊಂಡಿರುವುದು
(A) ಮತದಾರನ ಬಾಹ್ಯ ವೆಚ್ಚ
(B) ತೀರ್ಮಾನಿಸುವ ವೆಚ್ಚ (ಡಿಸಿಷನ್ ಮೇಕಿಂಗ್ ಕಾಸ್ಟ್)
(C) (A) ಮತ್ತು (B) ಎರಡೂ
(D) ಮೇಲಿನ ಯಾವುದೂ ಅಲ್ಲ

79. "ಇಂಪಾಸಿಬಿಲಿಟಿ ಥಿಯರಂ ಆಫ್ ಮೆಜಾರಿಟಿ ವೋಟಿಂಗ್" ನ ಲೇಖಕರು
(A) ಪಿ.ಎ. ಸ್ಯಾಮ್ಯುಯೆಲ್‌ಸನ್
(B) ಆರ್. ಎ. ಮಸ್‌ಗ್ರೇವ್
(C) ಹೆಚ್.ಆರ್. ಬೌನ್
(D) ಕೆ.ಜೆ. ಆ್ಯರೋ

80. "ಆ್ಯನ್ ಇಕಾನಾಮಿಕ್ ಥಿಯರಿ ಆಫ್ ಡೆಮೋಕ್ರಸಿ" ಬರೆದವರು
(A) ಪಾಲ್ ಎ. ಸ್ಯಾಮ್ಯುಯೆಲ್‌ಸನ್
(B) ಆಂಥೊನಿ ಡೌನ್ಸ್
(C) ಹೆಚ್. ಡಾಲ್ಟನ್
(D) ಕೆ.ಜೆ. ಆ್ಯರೋ

ಚಿತ್ತು ಬರಹಕ್ಕಾಗಿ ಸ್ಥಳ / SPACE FOR ROUGH WORK

A

www.kpsvaani.com

Scanned by CamScanner

81. ತೆರಿಗೆ ರಜೆಯು ಹೊಂದಿರುವ ಗುರಿ
(A) ಆದಾಯದ ಪುನರ್ ಹಂಚಿಕೆ
(B) ಬಡತನವನ್ನು ಕಡಿಮೆ ಮಾಡುವುದು
(C) ಪ್ರಾದೇಶಿಕ ಅಸಮತೋಲನವನ್ನು ಕಡಿಮೆ ಮಾಡುವುದು
(D) ಆದಾಯದ ಕಡಿತ

82. ಮತದಾನದ ವೈರುಧ್ಯ ಸಂಬಂಧಿಸಿರುವುದು
(A) ಸಾಪೇಕ್ಷ ಐಕ್ಯಮತ್ಯ
(B) ಅರ್ಹ ಬಹುಮತ
(C) ಆ್ಯರೋರ ಅಸಾಧ್ಯತಾ ಸಿದ್ಧಾಂತ
(D) ಅಲ್ಪಸಂಖ್ಯಾತರ ದಬ್ಬಾಳಿಕೆ

83. "ಸಾಮಾಜಿಕ ಆಯ್ಕೆ" ಯು ನಿರಂಕುಶವಾಗಿರಕೂಡದು ಎಂದು ಯಾರು ಹೇಳಿದರು ?
(A) ಆ್ಯಡಂ ಸ್ಮಿತ್
(B) ಆ್ಯಂಥೋನಿ ಡೌನ್ಸ್
(C) ಪಿ.ಎ. ಸ್ಯಾಮ್ಯುಯೆಲ್‌ಸನ್
(D) ಕೆ.ಜೆ. ಆ್ಯರೋ

84. ಟೈಬೌಟ್ ಮಾದರಿಯು ಸಂಬಂಧಿಸಿರುವುದು
(A) ಸಾರ್ವಜನಿಕ ಸರಕುಗಳ ಪೂರೈಕೆಯ ವಿಕೇಂದ್ರೀಕರಣ
(B) ಆದರ್ಶ ಆಯವ್ಯಯ ಪಟ್ಟಿ
(C) ಸಾರ್ವಜನಿಕ ಸರಕುಗಳ ವೆಚ್ಚ ಹಂಚಿಕೊಳ್ಳುವಿಕೆ
(D) ಖಾಸಗಿ ಸರಕುಗಳು

85. ಸಾರ್ವಜನಿಕ ಸರಕು ಹೊಂದಿರುವ ಲಕ್ಷಣವು
(A) ಬಾಹ್ಯತೆ
(B) ಭಾಜ್ಯತೆ
(C) ಬಳಕೆಯಲ್ಲಿ ಪೈಪೋಟಿ
(D) ಸಮಾನ ಹಂಚಿಕೆ

86. ಈ ಕೆಳಗಿನ ಯಾವುದು ಬಡತನ ರೇಖೆಗಿಂತ ಕೆಳಗಿರುವ ಜನರ ಸಂಖ್ಯೆಯನ್ನು ಸರಳವಾಗಿ ಕೊಡಿಸುತ್ತದೆ ?
(A) ಸೇನ್‌ರ ಅರ್ಹತಾ ಮಾರ್ಗ (ಕೆಪೇಬಿಲಿಟಿ ಅಪ್ರೋಚ್)
(B) ತಲೆ ಎಣಿಕೆ ಅನುಪಾತ
(C) ಕನಿಷ್ಠ ಅಗತ್ಯದ ಮಾರ್ಗ
(D) ಸೇನ್‌ರ ಬಡತನ ಅನುಪಾತ

87. ಅಭಿವೃದ್ಧಿಶೀಲ ರಾಷ್ಟ್ರಗಳನ್ನು ಜಗತ್ತಿನ ಕೊಳೆಗೇರಿಗಳೆಂದು ವರ್ಣಿಸಿದವರು ಯಾರು ?
(A) ಹೆಚ್. ಫೈಲ್
(B) ರಾಬರ್ಟ್ ಚೇಂಬರ್ಸ್
(C) ಕೇರ್‌ಕ್ರಾಸ್
(D) ಆರ್.ಎಫ್. ಹೆರಾಡ್

ಚಿತ್ತು ಬರಹಕ್ಕಾಗಿ ಸ್ಥಳ / SPACE FOR ROUGH WORK

A

www.kpsvaani.com

Scanned by CamScanner

88. ಜೀವನಮಟ್ಟವನ್ನು ಈ ರೀತಿಯಾಗಿ ಅಳೆಯಬಹುದು

(A) ಜೀವನ ನಿರೀಕ್ಷೆ
(B) ಶಿಕ್ಷಣ
(C) ಬಹು ಆಯಾಮದ ಬಡತನ ಸೂಚ್ಯಂಕ
(D) ತಲಾ ಜಿಡಿಪಿ (GDP)

89. ದೇಶದ ಎಲ್ಲರಿಗೂ ಸಾರ್ವತ್ರಿಕ ಆರೋಗ್ಯ ವಿಮೆ (UHC) ಈ ಕೆಳಗಿನ ಯಾವುದರ ಮುಖ್ಯ ಗುರಿಯಾಗಿರುವುದು ?

(A) 11 ನೆಯ ಪಂಚವಾರ್ಷಿಕ ಯೋಜನೆ
(B) 10 ನೆಯ ಪಂಚವಾರ್ಷಿಕ ಯೋಜನೆ
(C) 12 ನೆಯ ಪಂಚವಾರ್ಷಿಕ ಯೋಜನೆ
(D) 9 ನೆಯ ಪಂಚವಾರ್ಷಿಕ ಯೋಜನೆ

90. ಸಂಖ್ಯಾಶಾಸ್ತ್ರವು ದತ್ತಾಂಶಗಳಿಂದ ನಿರ್ಣಯಗಳನ್ನು ಪಡೆಯುವ ಈ ವಿಧಾನದೊಂದಿಗೆ ವ್ಯವಹರಿಸುತ್ತದೆ

(A) ಜನಗಣತಿ
(B) ಸಮೀಕ್ಷೆ
(C) ಯಾದೃಚ್ಛಿಕ ಸಮೀಕ್ಷೆ
(D) ವಿಶ್ಲೇಷಣಾತ್ಮಕ ಸಂಖ್ಯಾಶಾಸ್ತ್ರ

91. 'ಅಭಿವೃದ್ಧಿ' ಮತ್ತು 'ಬೆಳವಣಿಗೆ'ಗಳ ನಡುವಿನ ವ್ಯತ್ಯಾಸವು

(A) ಮೊದಲಿನದ್ದು ಅಭಿವೃದ್ಧಿ ಹೊಂದದ ರಾಷ್ಟ್ರಗಳನ್ನು ಕುರಿತು ಉಲ್ಲೇಖಿಸಿದರೆ ನಂತರದ್ದು ಅಭಿವೃದ್ಧಿ ಹೊಂದಿದ ರಾಷ್ಟ್ರಗಳನ್ನು ಕುರಿತು ಉಲ್ಲೇಖಿಸಿದೆ.
(B) ಮೊದಲಿನದ್ದು ಆರ್ಥಿಕತೆಯ ರಚನೆಯಲ್ಲಿ, ಸಾಮಾಜಿಕ ಅಭಿವ್ಯಕ್ತಿಯಲ್ಲಿ ಮೂಲಭೂತ ಬದಲಾವಣೆಯನ್ನು ಕುರಿತಾದರೆ ನಂತರದ್ದು ಸಾಮಾನ್ಯವಾಗಿ ಈಗಾಗಲೇ ಸುದೃಢವಾದ ಆರ್ಥಿಕತೆಯ ಏಕ ಪ್ರಕಾರವಾದ ಬದಲಾವಣೆಯ ಕುರಿತಾಗಿದೆ.
(C) (A) ಮತ್ತು (B) ಎರಡೂ
(D) (A) ಯೂ ಅಲ್ಲ (B)ಯೂ ಅಲ್ಲ

92. ಆ್ಯಡಂ ಸ್ಮಿತ್ ಪ್ರಕಾರ ಶ್ರಮದ ವಿಭಜನೆಯು ಅವಲಂಬಿತವಾಗಿರುವುದು ಇದರ ಮೇಲೆ

(A) ತಾಂತ್ರಿಕತೆ
(B) ಮಾರುಕಟ್ಟೆಯ ಗಾತ್ರ
(C) ನವೀನೀಕರಣ
(D) ಆವಿಷ್ಕಾರ

93. ತಲಾದಾಯ ಎಂದರೆ

(A) ನೈಜ ರಾಷ್ಟ್ರೀಯ ಆದಾಯ/ಜನಸಂಖ್ಯೆಯ ಗಾತ್ರ
(B) ನೈಜ ರಾಷ್ಟ್ರೀಯ ಆದಾಯ/ಕಾರ್ಯನಿರತ ಜನಸಂಖ್ಯೆ
(C) ನೈಜ ರಾಷ್ಟ್ರೀಯ ಆದಾಯ/ಕೆಲಸಗಾರರ ಸಂಖ್ಯೆ
(D) ನೈಜ ರಾಷ್ಟ್ರೀಯ ಆದಾಯ/ಮುಪ್ಪಾದವರ ಜನಸಂಖ್ಯೆ



www.kpsvaani.com

Scanned by CamScanner

94. ವಿಲೋಮ – 'U' ಕಲ್ಪನೆಯನ್ನು ಸೂತ್ರೀಕರಿಸಿದವರು ಯಾರು ?

(A) ಸೈಮನ್ ಕುಜ್‌ನೆಟ್ಸ್
(B) ಜೆರಾಲ್ಡ್ ಎಮ್. ಮೇಯರ್
(C) ಜೇಮ್ಸ್ ಎಮ್. ಸೈಫರ್
(D) ಕಿರೀಟ್ ಎಸ್. ಪಾರೀಖ್

95. ಲೊರೆನ್ಸ್ ರೇಖೆ ವಿಶ್ಲೇಷಿಸುವುದು

(A) ವೈಯಕ್ತಿಕ ವೆಚ್ಚ
(B) ವೈಯಕ್ತಿಕ ಉಳಿತಾಯ
(C) ವೈಯಕ್ತಿಕ ಆದಾಯ
(D) ವೈಯಕ್ತಿಕ ಋಣ

96. ರಿಕಾರ್ಡಿಯನ್ ಸಿದ್ಧಾಂತದ ಪ್ರಕಾರ, ಅಂತರ್‌ರಾಷ್ಟ್ರೀಯ ವಾಣಿಜ್ಯವು ರಾಷ್ಟ್ರಗಳ ಮಧ್ಯೆ ಇದರ ಆಧಾರದ ಮೇಲೆ ನಡೆಯುತ್ತದೆ

(A) ನಿರಪೇಕ್ಷ ವೆಚ್ಚ ತಾರತಮ್ಯ
(B) ಸದಾವಕಾಶ ವೆಚ್ಚದಲ್ಲಿ ತಾರತಮ್ಯ
(C) ತುಲನಾತ್ಮಕ ವೆಚ್ಚದಲ್ಲಿ ತಾರತಮ್ಯ
(D) ಚರ ವೆಚ್ಚದಲ್ಲಿ ತಾರತಮ್ಯ

97. ಅಂತರ್‌ರಾಷ್ಟ್ರೀಯ ವ್ಯಾಪಾರದ ನಿರಪೇಕ್ಷ ಅನುಕೂಲ ಸಿದ್ಧಾಂತವನ್ನು ಪ್ರತಿಪಾದಿಸಿದವರು

(A) ಡೇವಿಡ್ ರಿಕಾರ್ಡೋ
(B) ಜಿ.ಬಿ. ಹೇಬರ್‌ಲರ್
(C) ಆ್ಯಡಂ ಸ್ಮಿತ್
(D) ಹೆಕ್ಷರ್–ಓಲೀನ್

98. 'ರಾಚನಿಕ ಹೊಂದಾಣಿಕೆಯ ಕಾರ್ಯಕ್ರಮ'ವನ್ನು ಪ್ರಾರಂಭಿಸಿದವರು

(A) IMF ಮತ್ತು ವಿಶ್ವಬ್ಯಾಂಕು
(B) WTO
(C) UNDP
(D) UNO

99. ಚಾಲ್ತಿ ಖಾತೆಯು ಇದರ ಒಂದು ಅಂಗವಾಗಿದೆ

(A) ಹರಿವು ನಿಧಿಯ ಖಾತೆ
(B) ಪಾವತಿ ಶೇಷ ಖಾತೆ
(C) ಹೂಡುವಳಿ–ಹುಟ್ಟುವಳಿ ಖಾತೆ
(D) ಸಾಮಾಜಿಕ ಲೆಕ್ಕಾಚಾರ

100. ಹೆಕ್ಷರ್ ಮತ್ತು ಓಲೀನ್‌ನ ಸಿದ್ಧಾಂತದ ಪ್ರಕಾರ ಅಂತರ್‌ರಾಷ್ಟ್ರೀಯ ವ್ಯಾಪಾರವು ಲಾಭದಾಯಕವಾಗಿರುವುದು ಸಾಧ್ಯವಾದಷ್ಟು ರಾಷ್ಟ್ರಗಳಿಗೆ ಅವುಗಳ

(A) ಸದಾವಕಾಶ ವೆಚ್ಚದಲ್ಲಿ ತಾರತಮ್ಯತೆ ಇರುವಾಗ
(B) ಉತ್ಪಾದನಾಂಗಗಳ ಕೊಡುಗೆಯಲ್ಲಿ ತಾರತಮ್ಯತೆ ಇರುವಾಗ
(C) ಚರವೆಚ್ಚದಲ್ಲಿ ತಾರತಮ್ಯತೆ ಇರುವಾಗ
(D) ಸ್ಥಿರ ವೆಚ್ಚದಲ್ಲಿ ತಾರತಮ್ಯತೆ ಇರುವಾಗ

ಚಿತ್ತು ಬರಹಕ್ಕಾಗಿ ಸ್ಥಳ / SPACE FOR ROUGH WORK



www.kpsvaani.com

Scanned by CamScanner